ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 7–12–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಬೆಂಗಳೂರು ಐಟಿ ಇ.ಬಿಜ್ 2015<br><br>ಉದ್ಘಾಟನೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಮುಖ್ಯ ಅತಿಥಿಗಳು:<br><br>ಕೌಶಿಕ್ ಮುಖರ್ಜಿ,<br>ಮುಖ್ಯ ಕಾರ್ಯದರ್ಶಿಗಳು,<br>ಕರ್ನಾಟಕ ಸರ್ಕಾರ | 08–12–2015<br>ಮಂಗಳವಾರ<br>ಬೆಳಿಗ್ಗೆ<br>10–00 ಗಂಟೆಗೆ | ಕಾಳಿಂಗ– 1,<br>ದಿ. ಲಲಿತ್ ಅಶೋಕ್,<br>ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಹೊಸ ವೃತ್ತಿ ಘಟಕ ಪ್ರಾರಂಭಿಸಲು ಅರ್ಜಿ ಆಹ್ವಾನ

ಬೆಂಗಳೂರು, ಡಿಸೆಂಬರ್ 7 (ಕರ್ನಾಟಕ ವಾರ್ತೆ)

ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ 2016 ವರ್ಷದ ಶೈಕ್ಷಣಿಕ ವರ್ಷದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಎಸ್.ಸಿ.ವಿ.ಟಿ. ಅಡಿಯಲ್ಲಿ ಹೊಸ ವೃತ್ತಿ/ಘಟಕಗಳನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇಚ್ಛಿಸುವ ಸಂಘ ಸಂಸ್ಥೆಗಐ ಡಿಸೆಂಬರ್ 10 ರಿಂದ ಅರ್ಜಿಗಳನ್ನು ಆಯುಕ್ತರ ಕಚೇರಿ, ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ (ಸಂಯೋಜನಾ ವಿಭಾಗ) ಕೌಶಲ್ಯ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029 ಅಥವಾ ಉದ್ಯೋಗ ಮತ್ತು ತರಬೇತಿ ಇಲಾಖೆಯ ಅಂತರ್ಜಾಲ www.emptrg.kar.nic.in ನಲ್ಲಿ ಅರ್ಜಿ ಹಾಗೂ ಹೆಚ್ಚಿನ ಮಾಹಿತಿ ಪಡೆಯಬಹುದು. ತುಂಬಿದ ಅರ್ಜಿಗಳನ್ನು 2016 ರ ಜನವರಿ 25 ರೊಳಗೆ ಸಲ್ಲಿಸಬೇಕು ಎಂದು ಉದ್ಯೋಗ ಮತ್ತು ತರಬೇತಿ ಇಲಾಖೆ ಪ್ರಕಟಣೆ ತಿಳಿಸಿದೆ.

ಪಲ್ಲವಿ:ಬಾಬು:ಜಿಪಿಆರ್

## ಕೃಷಿ ಬೆಲೆ ಆಯೋಗ : ಇಲಾಖಾ ಮುಖ್ಯಸ್ಥರ ಕಾರ್ಯಾಗಾರ

ಬೆಂಗಳೂರು, ಡಿಸೆಂಬರ್ 7 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರವು 2015–16 ನೇ ಸಾಲಿಗೆ ಭತ್ತ ಮತ್ತು ರಾಗಿಗೆ ಬೆಂಬಲ ಬೆಲೆ ಸೂಚಿಸಿ ಖರೀದಿಗೆ ಪೂರ್ವಸಿದ್ಧತೆ ನಡೆಸುತ್ತಿದೆ. ಈ ಕಾರ್ಯವು ಸಮರ್ಪಕವಾಗಿ ನಡೆದು ರೈತರಿಗೆ ಅನುಕೂಲಮಾಡಿಕೊಡಬೇಕಾದ ಹಿನ್ನೆಲೆಯಲ್ಲಿ ಡಿಸೆಂಬರ್ 8 ರಂದು ಬೆಳಿಗ್ಗೆ 10–30 ಗಂಟೆಗೆ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ ಟಿ.ಎನ್. ಪ್ರಕಾಶ್ ಕಮ್ಮರಡಿ ಅವರ ಅಧ್ಯಕ್ಷತೆಯಲ್ಲಿ ಕೃಷಿ ಇಲಾಖೆಯ ಆವರಣದಲ್ಲಿರುವ ಸಮೃದ್ಧಿ ಸಭಾಂಗಣದಲ್ಲಿ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ.

ಈ ಸಭೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕೃಷಿ ಇಲಾಖೆ ಕಾರ್ಯದರ್ಶಿಗಳು ಇನ್ನಿತರ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳುವರು ಎಂದು ಕೃಷಿ ಬೆಲೆ ಆಯೋಗದ ಪ್ರಕಟಣೆ ತಿಳಿಸಿದೆ.

ಪಲ್ಲವಿ:ಬಾಬು:ಜಿಪಿಆರ್

## ಹೆಚ್ಚು ಬೆಲೆಗೆ ಮಾರಾಟ : 350 ಮೊಕದ್ದಮೆ ದಾಖಲು
## 4.15 ಲಕ್ಷ ರೂ. ಶುಲ್ಕ ವಸೂಲಿ

ಬೆಂಗಳೂರು, ಡಿಸೆಂಬರ್ 7 (ಕರ್ನಾಟಕ ವಾರ್ತೆ)

ಕಾನೂನು ಮಾಪನಶಾಸ್ತ್ರ ಇಲಾಖೆಯು ರಾಜ್ಯಾದ್ಯಂತ ಡಿಸೆಂಬರ್ 4 ಮತ್ತು 5 ರಂದು ರಾಜ್ಯದ ಎಲ್ಲಾ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣಗಳಲ್ಲಿ ತಪಾಸಣೆಯನ್ನು ಕೈಗೊಂಡು, ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್, ತಂಪು ಪಾನೀಯ ಮತ್ತು ಹಾಲಿನ ಪೊಟ್ಟಣಗಳನ್ನು ಮುದ್ರಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವವರ ವಿರುದ್ಧ ತಪಾಸಣೆಯನ್ನು ಕೈಗೊಂಡು, ದಿ. ಲೀಗಲ್ ಮೆಟ್ರಾಲಜಿ (ಪೊಟ್ಟಣ ಸಾಮಗ್ರಿ) ನಿಯಮಗಳು 2011 ರ

**ಉಲ್ಲಂಘನೆಗಾಗಿ 350 ಮೊಕದ್ದಮೆಗಳನ್ನು ದಾಖಲಿಸಿ ರೂ. 4,15,500/– ಅಭಿಸಂಧಾನ ಶುಲ್ಕ ವಸೂಲಿ ಮಾಡಲಾಗಿರುತ್ತದೆ.**

**ಸಾರ್ವಜನಿಕರು ಇಂತಹ ಪ್ರಕರಣಗಳನ್ನು ಗಮನಿಸಿದಲ್ಲಿ ದೂರುಗಳನ್ನು ಇಲಾಖೆಯ ದೂರವಾಣಿ ಸಂಖ್ಯೆ: 080–2225 3500, 2226 0554 ಅಥವಾ ಇ–ಮೇಲ್ ವಿಳಾಸ clm-lm=ka@niv.in ಗೆ ನೀಡಲು ಕೋರಿದೆ.**

**ಪಲ್ಲವಿ:ಬಾಬು:ಜಿಪಿಆರ್**

## ಪರವಾನಗಿ ಇಲ್ಲದೆ ಔಷಧ ಮಾರಾಟ : ಹೆಚ್ಚು ಮೊತ್ತದ ದಂಡ ವಿಧಿಸಿದ ಕೋರ್ಟ್

**ಬೆಂಗಳೂರು, ಡಿಸೆಂಬರ್ 7 (ಕರ್ನಾಟಕ ವಾತೆ)**

ಟಿವಿ 9 ಸುದ್ದಿವಾಹಿನಿಯಲ್ಲಿ ದಿನಾಂಕ 07/01/2013 ರಂದು ಪ್ರಸಾರವಾದ ವರದಿಯ ಕುರಿತಂತೆ ಔಷಧ ಪರಿವೀಕ್ಷಕರು, ರಾಜ್ಯ ಗುಪ್ತ ವಾರ್ತಾ ಶಾಖೆ, ಬೆಂಗಳೂರು ರವರು ತನಿಖೆ ನಡೆಸಿ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮಾವಳಿಗಳು 1940 ನ್ನು ಉಲ್ಲಂಘಿಸಿರುವುದಕ್ಕಾಗಿ ಶ್ರೀ ಜಹಾಂಗೀರ್ ಮಕಬುಲ್, ಶ್ರೀ ಆರ್. ಚಕ್ರವರ್ತಿ ಹಾಗೂ ಶ್ರೀ ಅಶೋಕ್ ಕುಮಾರ ಅಗರವಾಲ್ ರವರ ವಿರುದ್ಧ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೊಕದ್ದಮೆ ದಾಖಲಿಸಿರುತ್ತಾರೆ. ದಿನಾಂಕ 04/12/2015 ರಂದು ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ, ಬೆಂಗಳೂರು ರವರು ಆರೋಪಿ–1 ಆದ ಶ್ರೀ ಜಹಾಂಗೀರ್ ಮಕಬುಲ್, ಮಾಲೀಕರು ಮೆ॥ ನಸೀಮಾ ಮೆಟರನಿಟಿ & ಟ್ರೌಮಾ ಕೇರ್ ಸೆಂಟರ್, ಬೆಂಗಳೂರು–39 ರವರಿಗೆ ಪರವಾನಗಿ ಇಲ್ಲದೆ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮಾವಳಿಗಳು 1940 ನ್ನು ಉಲ್ಲಂಘಿಸಿ ಔಷಧ ಮಾರಾಟ ಮಾಡಿರುವುದಕ್ಕೆ ರೂ. 1,25,000/– ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೆ ಸಾದಾ ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿರುತ್ತಾರೆ. ಸದರಿ ಪ್ರಕರಣದಲ್ಲಿ ಆರೋಪಿ–2 ಆದ ಶ್ರೀ ಆರ್. ಚಕ್ರವರ್ತಿ, ಮಾಲೀಕರು, ಮೆ॥ ಶ್ರೀ ವೆಂಕಟೇಶ್ವರ ಫಾರ್ಮಾ, ಬೆಂಗಳೂರು–40 ಮತ್ತು ಆರೋಪಿ–3 ಆದ ಶ್ರೀ ಅಶೋಕ್ ಕುಮಾರ ಅಗರವಾಲ್, ಮಾಲೀಕರು ಮೆ॥ ಸನರೆಕ್ಸ್ ಫಾರ್ಮಾಸೂಟಿಕಲ್ಸ್, ಬೆಂಗಳೂರು–40 ರವರುಗಳಿಗೆ ತಲಾ ರೂ.20,000 (ಒಟ್ಟು ರೂ.40,000) ದಂಡ ಹಾಗೂ ನ್ಯಾಯಾಲಯದ ಅವಧಿ ಮುಗಿಯುವವರೆಗೆ ಸಾದಾ ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿರುತ್ತಾರೆ.

ಬಾಬು/ಕೆಎಂ